ಅಧಿಕಾರಿಗಳ ಸಮ್ಮುಖದಲ್ಲಿ ಮಾಡಿದ್ದುದು. ಅಷ್ಟೇ ಅಲ್ಲ, ಉಡುಪಿಗೆ ಪರ್ಯಾಯ ಮಹೋತ್ಸವಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿ ಹೋದರು, ಆದರೆ ಒಂದು ರೂಪಾಯಿ ಕೂಡ ಕೊಡಲಿಲ್ಲ. ಮುಖ್ಯಮಂತ್ರಿಗಳು ಪಬ್ಲಿಕ್ ಮೀಟಿಂಗ್‌ದಲ್ಲಿ ಹೇಳಿದ್ದು, ಪ್ರೆಸ್‌ನಲ್ಲಿ ಹೇಳಿದ್ದು ಭರವಸೆಯನ್ನು ಅಧಿಕಾರಿಗಳು ನಿಮಗೆ ಹೇಳಲಿಲ್ಲವೆಂದರೆ, ಇದು ಎಂತಹ ಸರ್ಕಾರದ ವ್ಯವಸ್ಥೆ ಎಂದು ನಮಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಮೀರಾಜುದ್ದೀನ್ ನೀವು ಸ್ವಲ್ಪ ದಯಮಾಡಿ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಸದಸ್ಯರು, ಈ ರೀತಿಯಾಗಿ ಕೇಳಿದರು, ನೀವು ಏನಾದರೂ ಹೇಳಿದ್ದೀರಾ ಎಂದು ಕೇಳಿ ಆಲೋಚನೆ ಮಾಡಿ, ಆ ಹಣ ಹೇಗಿದೆ ನೋಡಿ, ಸ್ವಲ್ಪ ವ್ಯವಸ್ಥೆ ಮಾಡಿ.

ಶ್ರೀ ಮಿರಾಜುದ್ದೀನ್ ಎನ್ ಪಟೇಲ್: ಆಯಿತು, ಮಾಡುತ್ತೇನೆ.

ಅಧ್ಯಕ್ಷರು: ಈಗ ಕೃಷ್ಣಪ್ಪನವರ ಪ್ರಶ್ನೆ, ಉಮೇಶ್ ಕತ್ತಿಯವರೇ, ಉತ್ತರವನ್ನು ಹೇಳುವ ಮೊದಲು ಕೇಳಿ, ನೀವು ಸಚಿವ ಸಂಪುಟದ ಸದಸ್ಯರು, ನಿಮ್ಮ ಪ್ರಶ್ನೋತ್ತರ ಇರುವ ದಿವಸ ನೀವು ಬಂದು ಕಾಯದೆ, ನಾವು ನಿಮಗೋಸ್ಕರ... ಸದಸ್ಯರಿಗಾದರೆ ಗೈರು ಹಾಜರಾದರೆ ಸೆಕೆಂಡ್ ರೌಂಡ್ ಕೊಡುತ್ತೇವೆ. ನಿಮ್ಮ ಆಪ್ತ ಕಾರ್ಯದರ್ಶಿಗಳಿಗೆ ಅಷ್ಟು ಗೊತ್ತಾಗುವುದಿಲ್ಲವೇ?

ಶ್ರೀ ಉಮೇಶ್ ವಿ.ಕತ್ತಿ: ದಯಮಾಡಿ ಕ್ಷಮಿಸಬೇಕು, ಮಾನ್ಯ ಸದಸ್ಯರು ಕಛೇರಿಗೆ ಬಂದು ಒಂದು ಪ್ರತಿಯನ್ನು ತೆಗೆದುಕೊಂಡು ಹೋಗಿದ್ದರು, ನಾನು ಅವರು ಬರುವುದಿಲ್ಲವೆಂದು ತಿಳಿದುಕೊಂಡಿದ್ದೆ, ಕ್ಷಮಿಸಿ.

ಟೀ-ನರಸೀಪುರ ತಾಲ್ಲೂಕಿನ ಬನ್ನೂರಿನಲ್ಲಿ ಸಕ್ಕರೆ ಕಾರ್ಖಾನೆ ಮಂಜೂರಾತಿ

32 (199)

ಶ್ರೀ ಆರ್.ಕೃಷ್ಣಪ್ಪ (ಬನ್ನೂರು): ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ತಾಲ್ಲೂಕಿನ ಬನ್ನೂರಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಮಂಜೂರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಕಾರ್ಖಾನೆಯ ಹೆಸರೇನು?

ಆ) ಸದರಿ ಕಾರ್ಖಾನೆಯ ಕಾಮಗಾರಿಯು ಯಾವ ಹಂತದಲ್ಲಿದೆ ಹಾಗೂ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):

ಅ ಮತ್ತು ಆ) ಬಂದಿದೆ. ಈ ಕಾರ್ಖಾನೆಯ ಹೆಸರು ಮೆ.ಮೈಸೂರು ಫ್ರೂಟ್ ಪ್ರಾಡೆಕ್ಟ್ಸ್ ಲಿ. ಬೆಂಗಳೂರು. ಕಾರ್ಖಾನೆಯ ಕಾಮಗಾರಿ ಕೆಲಸಗಳು ಆರಂಭವಾಗಿರುವುದಿಲ್ಲ. ಕಾರ್ಖಾನೆಯ ಸ್ಥಾಪನೆಗಾಗಿ ನಿವೇಶನ ಖರೀದಿ ಕ್ರಮ ಮುಂದುವರೆದಿದ್ದು, ನಿವೇಶನ ಪಡೆದ ನಂತರ ಸದರಿ ಕ್ರಮ ಕೈಗೊಳ್ಳುವುದಾಗಿ ಆಡಳಿತ ವರ್ಗ ವರದಿ ಮಾಡಿದೆ.

ಶ್ರೀ ಆರ್.ಕೃಷ್ಣಪ್ಪ: ಸನ್ಮಾನ್ಯ ಅಧ್ಯಕ್ಷರೇ, ಸಕ್ಕರೆ ಕಾರ್ಖಾನೆಯ ಬಗ್ಗೆ ನಾನು ಒಂದು ಹಿನ್ನೆಲೆಯನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ಮಹದೇಶ್ವರ ಸಕ್ಕರೆ ಕಾರ್ಖಾನೆ ಇದ್ದು, ನಮ್ಮ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆ ಕಾರ್ಖಾನೆ ಕೂಡ ಕಮೆನ್ಸ್ ಆಗಲಿಲ್ಲ. ಈ ಸಕ್ಕರೆ ಕಾರ್ಖಾನೆ ನನಗೆ ಅನ್ನಿಸಿರುವ ಪ್ರಕಾರ ಮಂಜೂರಾಗಿ ಈಗಾಗಲೇ ಒಂದು ವರ್ಷವಾಗಿರಬಹುದು. ಈಗ ಸಚಿವರು ಹೇಳುತ್ತಾರೆ, ಜಾಗವನ್ನು ಹುಡುಕುತ್ತಿದ್ದೇವೆ, ಅದು ಯಾವ ಜಾಗದಲ್ಲಿ ಇದೆ, ಜಮೀನನ್ನು ಎಷ್ಟು ಖರೀದಿ ಮಾಡಿದ್ದಾರೆ ಯಾವ ಪರಿಸ್ಥಿತಿಯಲ್ಲಿದೆ, ಯಾವಾಗ ಅದನ್ನು ಅಡಿಗಲ್ಲು ಹಾಕುತ್ತಾರೆ, ಆ ಕಾರ್ಖಾನೆಯನ್ನು ಯಾವಾಗ ಪೂರ್ಣ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುತ್ತಾರೆಂದು ಮಾನ್ಯ ಸಚಿವರು ಉತ್ತರವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ: ಅಧ್ಯಕ್ಷರೇ, ಈ ಸಕ್ಕರೆ ಕಾರ್ಖಾನೆಯು ಖಾಸಗಿ ವಲಯದಲ್ಲಿ ಬರುತ್ತಿದ್ದು, ಈಗಾಗಲೇ ಇದಕ್ಕೆ ಸ್ಥಳವನ್ನು ನಿಗದಿಪಡಿಸಲು ಆ ಕಾರ್ಖಾನೆಯ ಮಾಲಿಕರು ಪ್ರಯತ್ನದಲ್ಲಿದ್ದಾರೆ. ಟಿ.ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿ ಬಳಿ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ವಿಚಾರ ಮಾಡಿರುತ್ತಾರೆ. ಜಾಗ ಸಿಕ್ಕ ಮೇಲೆ, ಏಕೆಂದರೆ ಇದು ಖಾಸಗಿ ವಲಯದಲ್ಲಿರುವುದರಿಂದ ಹಣಕಾಸಿನ ವ್ಯವಸ್ಥೆಯನ್ನು ಅವರು ಮಾಡಿಕೊಳ್ಳಬೇಕಾಗುತ್ತದೆ. ಅವರಿಗೆ ನಾವು ಸರ್ಕಾರದಿಂದ ಬೇಕಾದಂಥ ಸಹಾಯವನ್ನು ಮಾಡಬೇಕಾಗುತ್ತದೆ ಏನಃ ಉಳಿದ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಅವರದ್ದಾಗಿರುತ್ತದೆ. ಈಗಾಗಲೇ ನಾನು ಸಾಕಷ್ಟು ಸಲ ಖಾಸಗಿ ವಲಯದ ಮಾಲೀಕರನ್ನು ಕರೆಸಿ ಚರ್ಚೆಯನ್ನು ಮಾಡಿದ್ದೇನೆ. ಆದಷ್ಟು ಬೇಗ ಇದನ್ನು ಮಾಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆಂದು ತಮ್ಮ ಮೂಲಕ ಸದಸ್ಯರಿಗೆ ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಆರ್.ಕೃಷ್ಣಪ್ಪ: ಅಧ್ಯಕ್ಷರೇ, ಯಾವ ಜಾಗದಲ್ಲಿ ಪ್ರಯತ್ನ ಮಾಡಿದ್ದಾರೆ; ಅದರ ಸ್ಟೇಜ್ ಏನು? ಯಾವಾಗ ಅಡಿಗಲ್ಲು ಹಾಕುತ್ತಾರೆ, ಅದು ಆದರೂ ಗೊತ್ತಾಗಬೇಕಲ್ಲಾ. ಜಾಗವನ್ನು ನೋಡುತ್ತಾ ಇದ್ದರೆ 4-5 ವರ್ಷ ನೋಡುತ್ತಾ ಇರಬಹುದು. ಆದರೆ ಯಾವ ಜಾಗದಲ್ಲಿ ಇವತ್ತು ನೋಡಿದ್ದಾರೆ? ಇದರ ಬಗ್ಗೆ ಮಾನ್ಯ ಸಚಿವರು ತಕ್ಷಣ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ: ಅಧ್ಯಕ್ಷರೇ, ಇದು ಖಾಸಗಿ ವಲಯದಲ್ಲಿರುವುದರಿಂದ ಅಡಿಗಲ್ಲು ಹಾಕುವ ಪ್ರಶ್ನೆ ಬರುವುದಿಲ್ಲ. ಖಾಸಗಿಯವರು ಅದನ್ನು ಪ್ರಾರಂಭ ಮಾಡಬೇಕಾಗುತ್ತದೆ. ಆ ಸ್ಥಳವನ್ನು ಅವರು ಬನ್ನೂರು ಹೋಬಳಿ ಬಳಿ ಹುಡುಕಾಡಿದ್ದಾರೆ. ಆ ಜಾಗವನ್ನು ತಿಳಿಸಿದ ನಂತರ ಆದಷ್ಟು ಬೇಗ ಮುಂದಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದೆಂದು ತಮ್ಮ ಮೂಲಕ ಸದಸ್ಯರಿಗೆ ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಆರ್.ಕೃಷ್ಣಪ್ಪ: ಅಧ್ಯಕ್ಷರೇ, ಯಾವಾಗ ಆ ಸ್ಥಳದ ಬಗ್ಗೆ ತಿಳಿಸುತ್ತೀರಿ. ಅದನ್ನು ಸ್ವಲ್ಪ ಹೇಳಿ ಬಿಟ್ಟರೆ ಸಾಕು.

ಶ್ರೀ ಉಮೇಶ್ ವಿ.ಕತ್ತಿ: ಅಧ್ಯಕ್ಷರೇ, ಆದಷ್ಟು ಬೇಗ ಆ ಖಾಸಗಿ ವಲಯ ಮಾಲಿಕರಿಗೆ ತಿಳಿಸಿ, ಸರ್ಕಾರದ ಗೊಂದಲವು ಆಗದಂತೆ ಮಾಡುತ್ತೇವೆಂದು ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಖಾಸಗಿ ಕಾರ್ಖಾನೆ ಹೊಸದಾಗಿ ಮಾಡುತ್ತೇನೆಂದು ಯೋಚನೆ ಮಾಡುತ್ತಾರೆ, ಅದನ್ನು ಮಾಡುವಾಗ ವಿಶೇಷ ಕಾನೂನು ಮಾಡಬೇಕು. ವಿಶೇಷವಾಗಿ ಕುಂದೂರ್ ಕಾರ್ಖಾನೆ ಈಗಾಗಲೇ ಮುಚ್ಚಿದೆ. ಆ ಕಾರ್ಖಾನೆಯಲ್ಲಿ ಏನೂ ಇಲ್ಲ, ತೆಗೆಯುವುದು, ಮುಚ್ಚುವುದು ಈ ರೀತಿ ಮಾಡಬಾರದು. ಸುಮಾರು 400-500 ಎಕರೆ ಜಮೀನು ತೆಗೆದುಕೊಳ್ಳುವುದು, ಇಷ್ಟ ಬಂದಾಗ ತೆಗೆಯುವುದು, ಕಷ್ಟ ಬಂದಾಗ ಮುಚ್ಚುವುದು ಈ ರೀತಿಯಾಗಬಾರದು. ವಿಶೇಷವಾಗಿ ಕಾನೂನು ಮಾಡುವುದರ ಮೂಲಕ ಖಾಸಗಿ ವಲಯಕ್ಕೆ ಕೊಡಬೇಕು. ಉದಾಹರಣೆಗೆ ಕುಂದೂರ್ ಕಾರ್ಖಾನೆಗೆ ಏನು ಮಾಡಿದ್ದಾರೆ, ಅದು ಪೂರ್ಣ ಕುಂದೇ ಹೋಗುವುದು. ಯಾವಾಗ ಅದನ್ನು ನಿಲ್ಲಿಸುತ್ತೀರಿ ಅದನ್ನಾದರೂ ಒಂದು ಮಾತು ಹೇಳಿ.

ಶ್ರೀ ಉಮೇಶ್ ವಿ.ಕತ್ತಿ: ಅಧ್ಯಕ್ಷರೇ, ಸಕ್ಕರೆ ಕಾರ್ಖಾನೆಯನ್ನು ನಿಲ್ಲಿಸುವುದು ಕೇಂದ್ರ ಸರ್ಕಾರದ ಕೆಳಗಡೆ ಬರುವುದರಿಂದ, ರಾಜ್ಯ ಸರ್ಕಾರ ಕಾರ್ಖಾನೆ ಬಂದಾದಾಗ ಟೇಕ್ ಓವರ್ ಮಾಡುವ ವಿಚಾರ, ಚೆನ್ನಾಗಿ ನಡೆಸುವ ಪ್ರಯತ್ನ ರಾಜ್ಯ ಸರ್ಕಾರದವರದ್ದು ಇರುತ್ತದೆ. ಅದರ ಮೇಲೆ ನಾವು ಟೇಕ್ ಓವರ್ ಮಾಡುವುದಕ್ಕೆ ಬರುವುದಿಲ್ಲ. ಅವರು ತಪ್ಪು ಮಾಡಿದ್ದರೆ ಟೇಕ್ ಓವರ್ ಮಾಡಿಕೊಂಡು ಸರ್ಕಾರ ನಡೆಸುವುದು ಅಥವಾ ಪುನಃ ಅದನ್ನು ಬೇರೆಯವರು ನಡೆಸುವುದಕ್ಕೆ ಅವಕಾಶ ಮಾಡಿಕೊಡುವುದು ರಾಜ್ಯ ಸರ್ಕಾರಕ್ಕೆ ಇರುತ್ತದೆ. ಇದು ಕೇಂದ್ರ ಸರ್ಕಾರದ ಕೆಳಗಡೆ ಬರುವುದರಿಂದ ಇದಕ್ಕೆ ಹೆಚ್ಚಿನ ಕಾನೂನು ಮಾಡುವುದಕ್ಕೆ ನಮಗೆ ಬರುವುದಿಲ್ಲವೆಂದು ತಿಳಿಸಲು ಇಚ್ಛಿಸುತ್ತೇನೆ.

ಅಧ್ಯಕ್ಷರು: ಉತ್ತರ ತೃಪ್ತಿದಾಯಕವಾಗಿದೆ.